# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನಿಗಮ ಕಛೇರಿ:
ನಂ–29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು–5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821–2420850, ಫ್ಯಾಕ್ಸ್:0821–2434077
ಈ–ಮೇಲ್: seechnkodagu@cescmysore.org


ಸಂಖ್ಯೆ: ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ–127/2017–18/ ಉಸ.180 ದಿನಾಂಕ: 06.12.2017

## ಸಭೆಯ ನಡಾವಳಿಗಳು

ದಿನಾಂಕ 14.11.2017 ರಂದು ವಿರಾಜಪೇಟೆ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು:–

1. ಶ್ರೀ.ಕೆ.ರಾಮಚಂದ್ರ : ಅಧೀಕ್ಷಕ ಇಂಜಿನಿಯರ್ (ವಿ), ಮೈಸೂರು ವೃತ್ತ.
2. ಶ್ರೀಮತಿ ತಾರಾ ಎಸ್. : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ವೃತ್ತ ಕಛೇರಿ, ಮೈಸೂರು.
3. ಶ್ರೀ.ಬಿ.ಸೋಮಶೇಖರ್ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಡಿಕೇರಿ ವಿಭಾಗ.
4. ಶ್ರೀ.ಪಿ.ಎಸ್.ಸುರೇಶ್ : ಸಹಾಯಕ ಕರ್ಯನಿರ್ವಾಹಕ ಇಂಜಿನಿಯರ್(ವಿ), ವಿರಾಜಪೇಟೆ ಉಪವಿಭಾಗ.
5. ಶ್ರೀ.ಪಿ.ಎನ್.ದೇವಯ್ಯ : ಸಹಾಯಕ ಕರ್ಯನಿರ್ವಾಹಕ ಇಂಜಿನಿಯರ್(ತಾಂ), ಮಡಿಕೇರಿ ವಿಭಾಗ.
6. ಶ್ರೀಮತಿ ಅಲ್ಫೆನ್ಸೋ : ಲೆಕ್ಕಾಧಿಕಾರಿಗಳು, (ಆಂ.ಲೆ.ಪ), ಮಡಿಕೇರಿ ವಿಭಾಗೀಯ ಕಛೇರಿ.
7. ಶ್ರೀ.ಶಿವನಗೌಡ ಪಾಟೀಲ : ಸಹಾಯಕರು ಇಂಜಿನಿಯರ್(ವಿ), ವಿರಾಜಪೇಟೆ ಶಾಖೆ.
8. ಶ್ರೀ.ಎಚ್.ಎಸ್.ರಮೇಶ್ : ಕಿರಿಯ ಇಂಜಿನಿಯರ್(ವಿ), ಅಮ್ಮತ್ತಿ ಶಾಖೆ.
9. ಶ್ರೀ.ಕೆ.ಎಂ.ದಿಲೀಪ್ : ಸಹಾಯಕರು ಇಂಜಿನಿಯರ್(ತಾಂ), ವಿರಾಜಪೇಟೆ ಉಪವಿಭಾಗ.
10. ಶ್ರೀ.ಎನ್.ಟಿ.ಮಾದಯ್ಯ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಪಾಲಿಬೆಟ್ಟ ಶಾಖೆ.
11. ಶ್ರೀಮತಿ ಬಿ.ಜಿ. ಚಂಪಾವತಿ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಸಿದ್ದಾಪುರ ಶಾಖೆ.
12. ಶ್ರೀ.ಹರೀಶ್.ಎಂ.ಎಸ್ : ಹಿರಿಯ ಸಹಾಯಕರು, ಕಂದಾಯ ಶಾಖೆ, ವಿರಾಜಪೇಟೆ.

ಚಾ.ವಿ.ಸ.ನಿ.ನಿ. ನಿಗಮ ... ಮೈಸೂರು ಸಂ. 2821 ತಾ. 8/12/17

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಗೆ ಹಾಜರಿದ್ದ ಅಧೀಕ್ಷಕ ಇಂಜಿನಿಯರ್ (ವಿ) ರವರಾದ ಕೆ.ರಾಮಚಂದ್ರ ರವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿಕೊಳ್ಳುತ್ತ ಸಭೆಗೆ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸುತ್ತ ದಿನಾಂಕ:02.08.2017 ರಂದು ನಡೆದ ಸಭೆಯ ನಡಾವಳಿಗಳ ಬಗ್ಗೆ ಹಾಗು ಸಾಧಿಸಿದ ಪ್ರಗತಿ ಬಗ್ಗೆ ಚರ್ಚಿಸಿ ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಿ ಈ ಕೆಳಕಂಡಂತೆ ಸಲಹೆ ಸೂಚನೆಗಳನ್ನು ನೀಡಿದರು.

ದಿನಾಂಕ 02.08.2017 ರಂದು ವಿರಾಜಪೇಟೆ ಉಪವಿಭಾಗದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಬಾಕಿ ಉಳಿದಿರುವ ದೂರುಗಳ ವಿವರ

| ಕ್ರಮ ಸಂಖ್ಯೆ | ಸಲಹೆ/ದೂರು ಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಸಲಹೆ/ ದೂರುಗಳಿಗೆ ಉತ್ತರ |
|---|---|---|---|
| 1 | ಶ್ರೀ.ಚೇಕು | ಅಮ್ಮತ್ತಿ ಶಾಖಾ ವ್ಯಾಪ್ತಿಯ ಹಾಲುಗುಂದ ಗ್ರಾಮದ ಅನಿಯಮಿತ ವಿದ್ಯುತ್ ಅಡಚಣೆಯನ್ನು ನಿವಾರಿಸುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದರು. | * ಮುಖ್ಯ ಇಂಜಿನಿಯರ್(ವಿ) ರವರ ಕಛೇರಿಯಿಂದ ಕೆಲವು ನ್ಯೂನತೆಗಳೊಂದಿಗೆ ಅಂದಾಜುಪಟ್ಟಿಯನ್ನು ಹಿಂತಿರುಗಿಸಲಾಗಿದೆ. ನ್ಯೂನತೆಗಳನ್ನು ಸರಿಪಡಿಸಲಾಗಿದ್ದು ಅಂದಾಜುಪಟ್ಟಿಯನ್ನು ಮರುಸಲ್ಲಿಸಲಾಗುವುದು. |

ದಿನಾಂಕ 14.11.2017 ರಂದು ಪಡೆದ ದೂರುಗಳ ವಿವರ:–

| ಕ್ರಮ ಸಂಖ್ಯೆ | ಸಲಹೆ/ದೂರು ಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಸಲಹೆ/ ದೂರುಗಳಿಗೆ ಉತ್ತರ |
|---|---|---|---|

DGM-AAT AGM-RAY 11/12

| | | | |
|---|---|---|---|
| 1 | ಶ್ರೀ.ಕೆ.ಎಂ.ಅಪ್ಪಾಜಿ,<br>ಅರ್ಜಿ ಗ್ರಾಮ<br>ದೂ.9980150242 | * ವಿಜಯನಗರದಲ್ಲಿ ಬರುವ ತಮ್ಮ ನಿವೇಶನದ ಹಿಂಭಾಗದಲ್ಲಿ ಹೊಸದಾಗಿ ವಿದ್ಯುತ್ ಪರಿವರ್ತಕ ಕೇಂದ್ರ ನಿರ್ಮಾಣ ಮಾಡಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಸ್ಥಳಾಂತರಿಸಲು ಲಿಖಿತ ರೂಪದಲ್ಲಿ ಕೋರಿಕೊಂಡಿರುತ್ತಾರೆ | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡುತ್ತ ಕೂಡಲೇ ಸ್ಥಳ ಪರಿಶೀಲನೆ ಮಾಡಿ ವರದಿ ನೀಡುವಂತೆ ಸೂಚಿಸಿದರು ಹಾಗು ಸಾರ್ವಜನಿಕರಿಗೆ ತೊಂದರೆಯಾಗದಂತೆ ವಿದ್ಯುತ್ ಪರಿವರ್ತಕ ಕೇಂದ್ರ ನಿರ್ಮಾಣ ಮಾಡುವಂತೆ ಸ.ಕಾ.ನಿ.ಇಂಜಿನಿಯರ್ (ವಿ) ರವರಿಗೆ ಸೂಚಿಸಿದರು. |
| 2 | ಶ್ರೀಮತಿ.ಕಾಳಮಂಡ<br>ತಂಗಮ್ಮ<br>ಅರಮೇರಿ ಗ್ರಾಮ<br>ಮತ್ತು ಕದನೂರು<br>ಅಂಚೆ.<br>ದೂ.9483342880 | * ಅರಮೇರಿ ಗ್ರಾಮದಲ್ಲಿರುವ ತಮ್ಮ ಮನೆಯ ಮೇಲೆ ವಿದ್ಯುತ್ ತಂತಿಯು ಹಾದುಹೋಗಿದ್ದು ಅದನ್ನು ಸ್ಥಳಾಂತರಿಸುವಂತೆ ಈಗಾಗಲೇ ಮೊದಲ ಜನಸಂಪರ್ಕ ಸಭೆಯಲ್ಲಿ ದೂರಿದ್ದು ಇದುವರಗೆ ಸ್ಥಳಾಂತರ ಕಾರ್ಯ ಪೂರ್ಣಗೊಳ್ಳದ ಬಗ್ಗೆ ಆಕ್ಷೇಪ ವ್ಯಕ್ತ ಪಡಿಸಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡುತ್ತಾ ಕಾಮಗಾರಿಗೆ ಮಂಜೂರಾತಿ ನೀಡಲಾಗಿದ್ದು ಸಂಭಂಧಿಸಿದ ಶಾಖಾಧಿಕಾರಿಗಳು ಹಾಗು ನಿಗಮದ ಸಿಬ್ಬಂಧಿ ಕಾಮಗಾರಿಯನ್ನು ಕೈಗೆತ್ತಿಕೊಂಡ ಸಂಧರ್ಭದಲ್ಲಿ ಕಾಮಗಾರಿನ್ನು ಮಾಡದಂತೆ ತಾವುಗಳೇ ಅಡ್ಡಿಪಡಿಸಿರುವುದಾಗಿ ಸಂಭಂಧಪಟ್ಟ ಶಾಖಾಧಿಕಾರಿಗಳು ದೂರಿರುತ್ತಾರೆ. ಖುದ್ದಾಗಿ ಸದರೀ ಸ್ಥಳ ಪರಿಶಿಲನೆ ಮಾಡಲಾಗಿದ್ದು ಸಾರ್ವಜನಿಕ ರಸ್ತೆ ಬದಿಯಲ್ಲಿಯೇ ವಿದ್ಯುಚ್ಛಕ್ತಿ ಅಧಿನಿಯಮಗಳ ಪ್ರಕಾರ ಹಾಲಿಯಿರುವ ಕಟ್ಟಡಗಳಿಂದ ಸೂಕ್ತ ಅಂತರದಲ್ಲಿ ಮಾರ್ಗದ ರಚನೆ ಮಾಡುವ ಸಂಧರ್ಭದಲ್ಲಿ ತಾವುಗಳು ಅಡ್ಡಿಪಡಿಸಿದ್ದು, ಅವಶ್ಯವಿದ್ದಲ್ಲಿ ಹಾಲಿಯಿರುವ ವಿದ್ಯುತ್ ಮಾರ್ಗಕ್ಕೆ ಮಧ್ಯಂತರ ಕಂಬ ಅಳವಡಿಸಿ ಸಮಸ್ಯೆ ಪರಿಹರಿಸುವಂತೆ ಸೂಚಿಸಿದರು. |
| 3 | ಎಂ.ಜಿ.ಪೂಣಚ್ಚ,<br>ವಿ.ಬಾಡಗ<br>ದೂ.9448422371 | *ಬಿ.ಶೆಟ್ಟಿಗೇರಿ ಫೀಡರ್‌ನ ಮಾರ್ಗವು ತುಂಬಾ ದೂರವಿದ್ದು ಹಾಗೂ ಮಾರ್ಗವು ಹಲವು ಮಾಲೀಕರ ತೋಟಗಳ ಮಧ್ಯೆ ಹಾದುಹೋಗಿದ್ದು ಬಿ.ಶೆಟ್ಟಿಗೇರಿ ಅಕ್ಕಪಕ್ಕ ಗ್ರಾಮಗಳಲ್ಲಿ ಅನಿಯಮಿತ ವಿದ್ಯುತ್ ಅಡಚಣೆಯಿಂದಾಗಿ ಸಮಸ್ಯೆಯಾಗಿದ್ದು ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡರು.<br><br>* ಬಿ.ಶೆಟ್ಟಿಗೇರಿ ಸುತ್ತಮುತ್ತಲ ಗ್ರಾಮಗಳಲ್ಲಿನ ತೋಟಗಳಲ್ಲಿ ವಿದ್ಯುತ್ ಕಂಬಗಳ ಅಂತರ ದೂರವಿರುವುದರಿಂದ ವಿದ್ಯುತ್ ತಂತಿಯೂ ತೀರಾ ಕೆಳಮಟ್ಟದಲ್ಲಿ ಮನುಷ್ಯರಿಗೆ/ಆನೆಗಳಿಗೆ ವಿದ್ಯುತ್ ಆಘಾತವುಂಟಾಗುವ ಸಂಭವವಿರುವುದರಿಂದ ಅತಿ ಶೀಘ್ರ ಸರಿಪಡಿಸುವಂತೆ ಕೇಳಿಕೊಂಡರು.<br><br>* ಕಂಡಂಗಾಲದ ಹಲವು ಕಡೆ ಮಾರ್ಗವನ್ನು ಸ್ಥಳಾಂತರಿಸುವಂತೆ ಕೋರಿರುತ್ತಾರೆ | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) (ವಿ) ರವರು ಸದರೀ ಕಾಮಗಾರಿಯು ದೀನ್ ದಯಾಳು ಉಪಧ್ಯಾಯ ವಿದ್ಯುತ್ ಯೋಜನಯಡಿ ಹೊಸ ವಿದ್ಯುತ್ ಮಾರ್ಗವನ್ನು ರಚಿಸಿ ಸಮಸ್ಯೆ ಪರಿಹರಿಸಲಾಗುವುದೆಂದು ತಿಳಿಸಿದರು ಹಾಗು ಸದರೀ ಕಾಮಗಾರಿಯು ಈಗಾಗಲೇ ಪ್ರಾರಂಭಗೊಂಡಿದ್ದು ಅತಿ ಶೀಘ್ರದಲ್ಲಿ ಕೆಲಸ ಪೂರ್ಣಗೊಳಿಸಲಾಗುವುದೆಂದು ತಿಳಿಸಿದರು<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಸದರೀ ಕಾಮಗಾರಿಯೂ ಆನೆಕಾರಿಡಾರ್ ಯೋಜನೆಯಡಿಯಲ್ಲಿ ಸೇರಿದ್ದು ಶೀಘ್ರ ಕೆಲಸ ಮುಗಿಸುವಂತೆ ಹಾಗೂ ವಿದ್ಯುತ್ ಮಾರ್ಗಗಳು ಅತ್ಯಂತ ಅಪಾಯಕಾರಿ ಮಟ್ಟದಲ್ಲಿದ್ದರೆ ಒಂದು ಅಥವಾ ಎರಡು ಕಂಬಗಳ ಅವಶ್ಯಕತೆಯಿದ್ದಲ್ಲಿ ಸ್ಥಳ ಪರಿಶೀಲನೆ ಮಾಡಿ ಇಲಾಖೆ ವತಿಯಿಂದಲೇ ಸೂಕ್ತ ಕ್ರಮ ಕೈಗೊಳ್ಳುವಂತೆ ಸ.ಕಾ.ನಿ.ಇಂಜಿನಿಯರ್ (ವಿ) ರವರಿಗೆ ಸೂಚಿಸಿದರು<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾರ್ಗ ಸ್ಥಳಾಂತರ ಕಾರ್ಯವನ್ನು ಸ್ವಯಂ ನಿರ್ವಹಣಾ ಯೋಜನೆಯಡಿ ಮಾಡಿಕೊಳ್ಳುವಂತೆ ತಿಳಿಸಿದರು. |
| 4 | ಎಂ.ಎ.ಇಸ್ಮಾಯಿಲ್<br>ಮತ್ತು<br>ಎಂ.ಎಸ್.ಉಮ್ಮರ್‌ಕ್ಕೊ<br>ಟ್ಟೋಳಿ ಗುಂಡಿಗೆರೆ<br>ದೂ:7337682885 | * ಗುಂಡಿಗೆರೆ ಗ್ರಾಮಕ್ಕೆ ವೋಲ್ಟೇಜ್ ಸಮಸ್ಯೆಯಿರುವುದರಿಂದ ಪ್ರತ್ಯೇಕ ಪರಿವರ್ತಕ ಅಳವಡಿಸುವಂತೆ ಕೇಳಿಕೊಂಡರು<br><br>* ಗುಂಡಿಗೆರೆ ಸುತ್ತಮುತ್ತಲ ಗ್ರಾಮಗಳಲ್ಲಿನ ತೋಟಗಳಲ್ಲಿ ವಿದ್ಯುತ್ ಕಂಬಗಳ ಅಂತರ ದೂರವಿರುವುದರಿಂದ ವಿದ್ಯುತ್ ತಂತಿಯೂ ತೀರಾ ಕೆಳಮಟ್ಟದಲ್ಲಿ ಮನುಷ್ಯರಿಗೆ/ಆನೆಗಳಿಗೆ ವಿದ್ಯುತ್ ಆಘಾತವುಂಟಾಗುವ ಸಂಭವವಿರುವುದರಿಂದ ಅತಿ ಶೀಘ್ರ ಸರಿಪಡಿಸುವಂತೆ ಕೇಳಿಕೊಂಡರು | * ಇದಕ್ಕೆ ಉತ್ತರಿಸಿದ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ದೀನ್ ದಯಾಳ್ ಉಪಾದ್ಯಾಯ ಗ್ರಾಮ ವಿದ್ಯುತ್ ಯೋಜನೆಯಡಿಯಲ್ಲಿ ಒಳಗೊಂಡಿದ್ದು ಅತಿ ಶೀಘ್ರದಲ್ಲಿ ಪ್ರತ್ಯೇಕ ಪರಿವರ್ತಕ ಅಳವಡಿಸಲಾಗುವುದು ಎಂದು ತಿಳಿಸಿದರು.<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಸದರೀ ಕಾಮಗಾರಿಯೂ ಆನೆಕಾರಿಡಾರ್ ಯೋಜನೆಯಡಿಯಲ್ಲಿ ಸೇರಿದ್ದು ಶೀಘ್ರ ಕೆಲಸ ಮುಗಿಸುವಂತೆ ಹಾಗೂ ವಿದ್ಯುತ್ ಮಾರ್ಗಗಳು ಅತ್ಯಂತ ಅಪಾಯಕಾರಿ ಮಟ್ಟದಲ್ಲಿದ್ದರೆ ಒಂದು ಅಥವಾ ಎರಡು ಕಂಬಗಳ ಅವಶ್ಯಕತೆಯಿದ್ದಲ್ಲಿ ಸ್ಥಳ ಪರಿಶೀಲನೆ ಮಾಡಿ ಇಲಾಖೆ ವತಿಯಿಂದಲೇ ಸೂಕ್ತ ಕ್ರಮ ಕೈಗೊಳ್ಳುವಂತೆ ಸ.ಕಾ.ನಿ.ಇಂಜಿನಿಯರ್ (ವಿ) ರವರಿಗೆ ಸೂಚಿಸಿದರು |
| 5 | ಸಂಜಪ್ಪ, ಬೇಟೋಳಿ<br>ಗ್ರಾಮ<br>ದೂ:9449790189 | * ಮಾಸಿಕ ವಿದ್ಯುತ್ ಬಿಲ್ ಒದಗಿಸದೇ ಇರುವ ಬಗ್ಗೆ ಆಕ್ಷೇಪಣೆ ವ್ಯಕ್ತ ಪಡಿಸಿದರು.<br><br>* ಬೇಟೋಳಿ ವ್ಯಾಪ್ತಿಯಲ್ಲಿ ವಿದ್ಯುತ್ ಅಡಚಣೆ | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಪ್ರಸಕ್ತ ತಿಂಗಳಿನಿಂದ ಸೆಸ್ಕ್‌ನ ಎಲ್ಲಾ ಶಾಖೆಗಳಲ್ಲಿ ಸಾಕಷ್ಟು ಸುಧಾರಣೆಗೊಂಡಿದ್ದು ಮುಂದಿನ ತಿಂಗಳು ಮನೆಗೆ ತೆರಳಿ ಬಿಲ್ ಒದಗಿಸಲು ಕ್ರಮ ತೆಗೆದುಕೊಳ್ಳುವಂತೆ ಸ.ಕಾ.ನಿ.ಇಂಜಿನಿಯರ್(ವಿ) ರ ವರಿಗೆ ಸೂಚಿಸಿದರು.<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಪ್ರಸ್ತುತ ಬೇಟೋಳಿ |

| | | | |
|---|---|---|---|
| | | ತೀವ್ರವಾಗಿದ್ದು ಸರಪಡಿಸುವಂತೆ ತಿಳಿಸಿದರು.<br><br>* ತಮ್ಮ ಮನೆಯ ಆವರಣದಲ್ಲಿ ಎಲ್.ಟಿ ಮಾರ್ಗ ಸ್ಥಳಾಂತರಿಸಲು ಉಗ್ರಾಣದಿಂದ ಸಾಮಾಗ್ರಿಗಳನ್ನು ನೀಡುವಂತೆ ಕೋರಿದರು.<br><br>* ಗುಂಡಿಗೆರೆ ಸುತ್ತಮುತ್ತಲ ಗ್ರಾಮಗಳಲ್ಲಿನ ತೋಟಗಳಲ್ಲಿ ವಿದ್ಯುತ್ ಕಂಬಗಳ ಅಂತರ ದೂರವಿರುವುದರಿಂದ ವಿದ್ಯುತ್ ತಂತಿಯೂ ತೀರಾ ಕೆಳಮಟ್ಟದಲ್ಲಿ ಮನುಷ್ಯರಿಗೆ/ಆನೆಗಳಿಗೆ ವಿದ್ಯುತ್ ಆಘಾತವುಂಟಾಗುವ ಸಂಭವವಿರುವುದರಿಂದ ಅತಿ ಶೀಘ್ರ ಸರಿಪಡಿಸುವಂತೆ ಕೇಳಿಕೊಂಡರು.<br><br>* ಬೇಟೋಳಿ ಗ್ರಾಮಕ್ಕೆ ವೋಲ್ಟೇಜ್ ಸಮಸ್ಯೆಯಿರುವುದರಿಂದ ಪ್ರತ್ಯೇಕ ಪರಿವರ್ತಕ ಅಳವಡಿಸುವಂತೆ ಕೇಳಿಕೊಂಡರು | ಹಾಗೂ ಪಾಲಂಗಾಲ ಗ್ರಾಮವು ಹಾಲಿಯಿರುವ 11 ಕೆ.ವಿ ಬೇತ್ರಿ ಮಾರ್ಗದಿಂದ ವಿದ್ಯುತ್ ಸರಬರಾಜಾಗುತ್ತಿದ್ದು ಪಾಲಂಗಾಲ ಗ್ರಾಮಕ್ಕೆ ಪ್ರತ್ಯೇಕ ಮಾರ್ಗವನ್ನು ಅಳವಡಿಸುವ ಕಾಮಗಾರಿಯು ಐಪಿಡಿಎಸ್ ಯೋಜನೆಯಡಿ ಕೈಗೊಂಡಿದ್ದು ಕಾರ್ಯ ಪ್ರಗತಿಯಲ್ಲಿರುತ್ತದೆ ಎಂದು ತಿಳಿಸಿದರು.<br><br>* ಹಾಲಿಯಿರುವ ಮಾರ್ಗವನ್ನು ಸ್ಥಳಾತರಿಸುವ ಕಾರ್ಯವನ್ನು ಸ್ವಯಂ ನಿರ್ವಹಣಾ ಯೋಜನೆಯಡಿಯಲ್ಲಿ ಕೈಗೊಳ್ಳಬೇಕಾಗಿದ್ದು ವಿಭಾಗೀಯ ಉಗ್ರಾಣದಿಂದ ಯಾವುದೇ ರೀತಿಯ ಸಾಮಾಗ್ರಿಗಳನ್ನು ಒದಗಿಸಲಾಗುವುದಿಲ್ಲವೆಂದು ತಿಳಿಸಿದರು.<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಸದರೀ ಕಾಮಗಾರಿಯೂ ಆನೆಕಾರಿಡಾರ್ ಯೋಜನೆಯಡಿಯಲ್ಲಿ ಸೇರಿದ್ದು ಶೀಘ್ರ ಕೆಲಸ ಮುಗಿಸುವಂತೆ ಹಾಗೂ ವಿದ್ಯುತ್ ಮಾರ್ಗಗಳು ಅತ್ಯಂತ ಅಪಾಯಕಾರಿ ಮಟ್ಟದಲ್ಲಿದ್ದರೆ ಒಂದು ಅಥವಾ ಎರಡು ಕಂಬಗಳ ಅವಶ್ಯಕತೆಯಿದ್ದಲ್ಲಿ ಸ್ಥಳ ಪರಿಶೀಲನೆ ಮಾಡಿ ಇಲಾಖೆ ವತಿಯಿಂದಲೇ ಸೂಕ್ತ ಕ್ರಮ ಕೈಗೊಳ್ಳುವಂತೆ ಸ.ಕಾ.ನಿ.ಇಂಜಿನಿಯರ್ (ವಿ) ರವರಿಗೆ ಸೂಚಿಸಿದರು<br><br>* ಹೆಚ್ಚುವರಿ ಪರಿವರ್ತಕವು ಈಗಾಗಲೇ ಮಂಜೂರುಗೊಂಡಿದ್ದು ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಶಾಖಾಧಿಕಾರಿಗಳು ಮಾತನಾಡುತ್ತ ಈಗಾಗಲೇ ಪರಿವರ್ತದ ಮೇಲಿರುವ ಭಾರವನ್ನು ಸೂಕ್ತ ರೀತಿಯಲ್ಲಿ ವಿಭಾಗಿಸಿದ್ದು ವೋಲ್ಟೇಜ್ ಸಮಸ್ಯೆಯನ್ನು ನಿವಾರಿಸಿರುವುದಾಗಿ ತಿಳಿಸಿದರು. |
| 6 | ಕುಟ್ಟಂಡ ಪ್ರಭು,<br>ಕುಕ್ಲೂರು ಗ್ರಾಮ,<br>ಭದ್ರಕಾಳಿ<br>ದೇವಸ್ಥಾನದ ಹತ್ತಿರ<br>ದೂ.9480463624 | * ಶ್ರೀಯುತರ ಮನೆಯ ಪಕ್ಕದಲ್ಲಿರುವ ಪರಿವರ್ತಕವು ವಾಲಿದ್ದು ಸದರೀ ಪರಿವರ್ತಕದ ಎಲ್.ಟಿ ಮತ್ತು ಎಚ್.ಟಿ ಮಾರ್ಗವು ಜೋತು ಬಿದ್ದಿದ್ದು ಸರಪಡಿಸುವಂತೆ ಕೇಳಿಕೊಂಡರು.<br><br>* ಎಲ್.ಟಿ ಹಾಗೂ ಎಚ್.ಟಿ ಮಾರ್ಗದ ಅಕ್ಕಪಕ್ಕ ದಲ್ಲಿ ಮರಗಿಡಗಳು ಬೆಳದಿದ್ದು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಹಾಲಿಯಿರುವ ಪರಿವರ್ತಕವನ್ನು ಸ್ಥಳಪರಿಶೀಲಿಸಿ ಸದರೀ ಪರಿವರ್ತಕದ ಎಲ್.ಟಿ. ಮತ್ತು ಹೆಚ್.ಟಿ. ಮಾರ್ಗವನ್ನು ಸರಿಪಡಿಸುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು.<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಸಂಭಂಧಪಟ್ಟ ಶಾಖಾಧಿಕಾರಿಗಳು ಸ್ಥಳ ಪರಿಶೀಲಸಿ ಸೂಕ್ತ ಕ್ರಮತೆಗೆದುಕೊಳ್ಳುವಂತೆ ಸೂಚಿಸಿದರು. |
| 7 | ಅಲ್ಲಪ್ಪಿರ ನಂಜಪ್ಪ<br>ಕುಂಜಿಲಗೇರಿ<br>ದೂ.9483308333 | * ಕುಂಜಿಲಗೇರಿ ಗ್ರಾಮಕ್ಕೆ 11 ಕೆ.ವಿ ಪಾರಾಣೆ ಮಾರ್ಗವು ಮೂರ್ನಾಡು ಉಪಕೇಂದ್ರದಿಂದ ಸರಬರಾಜಾಗುತ್ತಿದ್ದು ಪ್ರತಿ ಬಾರಿಯೂ ಅಡಚಣೆಯುಂಟಾದಾಗ ಮೂರ್ನಾಡು ಶಾಖೆಯ ನೌಕರರು ಡಿ.ಓ.ಎಲ್.ಓ ತೆಗೆದಿಡತ್ತಿರುವುದರಿಂದ ವಿದ್ಯುತ್‌ನಲ್ಲಿ ಅಡಚಣೆಯುಂಟಾಗುತ್ತಿರುವುದರಿಂದ ವಿರಾಜಪೇಟೆ ಉಪಕೇಂದ್ರದಿಂದ ವಿದ್ಯುತ್ ಸಂಬರಾಜು ಮಾಡುವಂತೆ ಕೇಳಿಕೊಂಡರು.<br><br>* ತಮ್ಮ ಮನೆಯ ಪಕ್ಕದ ಎಲ್.ಟಿ ಮಾರ್ಗದಲ್ಲಿನ 2 ಪಿನ್ ಕ್ರಾಸ್ ಆರ್ಮ್ ಕಳಚಿದ್ದು ಸರಿಪಡಿಸುವಂತೆ ತಿಳಿಸಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಶಾಖಾಧಿಕಾರಿಗಳಿಗೆ ಕೂಡಲೇ ಸ್ಥಳ ಪರಿಶೀಲಸಿ ಅಭಿವೃದ್ಧಿ ಯೋಜನೆಯಡಿ ಅಂದಾಜು ಪಟ್ಟಿ ತಯಾರಿಸುವಂತೆ ಸೂಚಿಸಿದರು.<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಶಾಖಾಧಿಕಾರಿಗಳಿಗೆ ಕೂಡಲೇ ಸ್ಥಳ ಪರಿಶೀಲಸಿ ಸರಿಪಡಿಸುವಂತೆ ಸೂಚಿಸಿದರು. |
| 8 | ಎಂ.ಸಿ.ಸುಬ್ಬಯ್ಯ<br>ಗಾಂಧಿನಗರ<br>ದೂ.9141318828 | * ಗಾಂಧಿನಗರದ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಅಡಚಣೆಯು ಕಳೆದ ಎರಡು ತಿಂಗಳಿನಿಂದ ತೀವ್ರವಾಗಿದ್ದು ಸರಿಪಡಿಸುವಂತೆ ತಿಳಿಸಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ (ವಿ) ರವರು ಸದರೀ ಕಾಮಗಾರಿಯು ಐ.ಪಿ.ಡಿ.ಎಸ್ ವಿದ್ಯುತ್ ಯೋಜನೆಯಡಿ ಈಗಾಗಲೇ ಪ್ರಾರಂಭಗೊಂಡಿದ್ದು ಅತಿ ಶೀಘ್ರದಲ್ಲಿ ಹೊಸ ವಿದ್ಯುತ್ ಪರಿವರ್ತಕವನ್ನು ಅಳವಡಿಸಲಾಗುವುದೆಂದು ತಿಳಿಸಿದರು |

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು

<u>ಪ್ರತಿಯನ್ನು:</u>

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ವಿರಾಜಪೇಟೆ ಉಪವಿಭಾಗ ರವರ ಮಾಹಿತಿಗಾಗಿ.
7. ಓಆಸ/ಪ್ರಕ/ಕಡತ.